ಹೀಗೊಮ್ಮೆ ಗುರುರಾಜನ ಕೈಗೆ ಸಿಕ್ಕಿದ್ದು 'ಅಭಿಜಾತೆ' ಕಾದಂಬರಿ. ವಾಚನಾಲಯದ ಪುಸ್ತಕ ಸಂತೆಯ ಶಿಸ್ತಿನ ಸಾಲೊಂದರಲ್ಲಿ ಹುದುಗಿಕೊಂಡಿದ್ದ, ಮಾಸದ ಹೊದಿಕೆಯ ನೂರೈವತ್ತು ಪುಟಗಳು. ಹಿಂದಿನ ಹೊದಿಕೆಯ ಒಳಬದಿಗೆ ಅಂಟಿಸಿದ ಹಿಂತಿರುಗಿಸುವ ದಿನಾಂಕ ನಮೂದಿಸುವ ಚೀಟಿಯಲ್ಲಿ, ಕಳೆದ ಐದು ವರ್ಷಗಳಲ್ಲಿ ಕೇವಲ ಮೂರು ದಾಖಲೆಗಳು. ಲೇಖಕರ ಹೆಸರು ತೇಜಶ್ರೀ. ಕೇಳಿದ ಹೆಸರಲ್ಲವೇ ಅಲ್ಲ. ನಿಜ ನಾಮವೋ ಕಾವ್ಯನಾಮವೋ ಅದೂ ಗೊತ್ತಿಲ್ಲ. ಆದರೂ ಏಕೊ 'ಅಭಿಜಾತೆ'ಯನ್ನು ಮತ್ತೂ ಎರಡು ಪುಸ್ತಕಗಳೊಡನೆ ಗುರುರಾಜ ತನ್ನೊಡನೆ ಮನೆಗೆ ತಂದಿದ್ದ. ಗೆಳೆಯ ಪಾಟೀಲ, ತನಗೆ ಮಗ ಹುಟ್ಟಿದ ಖುಷಿಯಲ್ಲಿ ಕೊಟ್ಟ ಪಾರ್ಟಿ ಮುಗಿಸಿಕೊಂಡು ಬಂದು ಹಾಸಿಗೆಗೆ ಬೆನ್ನು ಕೊಟ್ಟಾಗ ಓದಲು ಬೇರೇನೂ ಸಿಕ್ಕದ ಒಂದು ಶನಿವಾರ, ಹೇಗಿದ್ದರೂ ಇನ್ನೆರಡು ದಿನಕ್ಕೆ ಹಿಂದಿರುಗಿಸಬೇಕಲ್ಲ ಕಣ್ಣಾಡಿಸಿದರಾಯಿತು ಎಂಬ ಉಪೇಕ್ಷೆಯಿಂದಲೇ 'ಅಭಿಜಾತೆ'ಯನ್ನು ಕೈಗೆತ್ತಿಕೊಂಡ ಗುರುರಾಜ. ಆದರೆ, 'ಅಭಿಜಾತೆ' ಗುರುರಾಜನನ್ನು ಯಾವ ಪರಿ ಆವರಿಸಿಕೊಂಡಳೆಂದರೆ, ಕೊನೆಯ ಅಕ್ಷರ ಓದಿದ ಮೇಲೆ ನೋಡಿದರೆ, ಮೊಬೈಲು ಬೆಳಗಿನ ನಾಲ್ಕರ ಸಮಯ ತೋರಿಸುತ್ತಿತ್ತು. ಬೆಡ್ ಲ್ಯಾಂಪ್ ಆರಿಸಿ, 'ಅಭಿಜಾತೆ'ಯನ್ನು ಎದೆಯ ಮೇಲಿಟ್ಟುಕೊಂಡೇ ರೆಪ್ಪೆ ಮುಚ್ಚಿದಾತನ ಕಣ್ಣಮುಂದೆ ಗೆಜ್ಜೆದನಿ ಹೊರಡಿಸುತ್ತಿದ್ದವಳು ಯಾವಾಗ ನಿದ್ದೆಗೆ ಜಾರಿದಳೊ!

ಲೇಖಕ ತನ್ನನ್ನೇ ಕಥಾನಾಯಕನನ್ನಾಗಿಸಿಕೊಂಡು, ಸ್ವಗತದ ಶೈಲಿಯಲ್ಲೆನ್ನಿ ಅಥವಾ ದಿನಚರಿಯ ಶೈಲಿಯಲ್ಲೆನ್ನಿ, ಬರೆದ ಭಗ್ನಪ್ರೇಮ ಕಥಾನಕವದು. ಹುಡುಗ ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನಿಯರ್. ಪ್ರವೃತ್ತಿಯಿಂದ ಉತ್ಕಟ ಕಲಾಪ್ರೇಮಿ. ಆಗಾಗ ಕೈಯಲ್ಲಿ ಕುಂಚ ಹಿಡಿದು ಕ್ಯಾನ್ವಾಸಿಗೆ ಬಣ್ಣ ತುಂಬುತ್ತಾನೆ. ತಂಬೂರಿ ಮೀಟುತ್ತ ಸ್ವರ ತೆಗೆಯುತ್ತಾನೆ. ಸೌಂದರ್ಯಕ್ಕೆ ಮನಸೋತು, ತನ್ನಲ್ಲೇ ತಾನು ಕಳೆದುಹೋಗುವಷ್ಟು ಭಾವಜೀವಿ. ಯಾರದೋ ದುಃಖಕ್ಕೆ ನೊಂದುಕೊಳ್ಳುವ ಮೃದುಹೃದಯಿ. ಆತ ಕಥಾನಾಯಕಿಯ ಸಂಪರ್ಕಕ್ಕೆ ಬರುವುದು ಆಫೀಸಿನ ಕಾರ್ಯಕ್ರಮವೊಂದರಲ್ಲಿ. ದೊಡ್ಡ ವಿದೇಶಿ ಪ್ರಾಜೆಕ್ಟ್ ಒಂದನ್ನು ಯಶಸ್ವಿಯಾಗಿ ಪೂರೈಸಿದ್ದಕ್ಕಾಗಿ ಏರ್ಪಡಿಸಿದ್ದ ಸಂತೋಷಕೂಟದಲ್ಲಿ, ಅಭಿಜಾತೆಯ ನರ್ತನ ಆತನ ಮನಸೂರೆಗೊಂಡಿತ್ತು. ಸುಶ್ರಾವ್ಯ ಗೀತೆಗೆ ತಕ್ಕಂತೆ ನರ್ತಿಸುತ್ತಿದ್ದ ಹದಿಹರೆಯದ ನರ್ತಕಿಯ ಗೆಜ್ಜೆಕಾಲ್ಗಳ ಆಟ, ಸೊಂಪಾದ ಮೈಸಿರಿಯ ಲಾಲಿತ್ಯಪೂರ್ಣ ಬಳುಕಾಟ, ಆಂಗಿಕ ಅಭಿನಯ, ನಾಜೂಕು ಬೆರಳುಗಳ ನಾನಾವಿಧ ಮುದ್ರೆಗಳು, ಸುಂದರ ಮೊಗದಲ್ಲಿ ಚಿಮ್ಮಿ ಹೃದಯಕ್ಕೆ ಲಗ್ಗೆ ಇಡುತ್ತಿದ್ದ ನವರಸಗಳು ಉಫ್, ಕಣ್ಣು ಕಿವಿ ಮನಸುಗಳಿಗೆಲ್ಲ ರಸದೌತಣ. ಕಾರ್ಯಕ್ರಮದ ನಂತರ ನಾಯಕ ನಾಯಕಿಯನ್ನು ಭೆಟ್ಟಿಯಾಗಿ ತನ್ನ ಮೆಚ್ಚುಗೆ ತಿಳಿಸುತ್ತಾನೆ. ತನ್ನ ಫೋನ್ ನಂಬರ್ ಕೊಟ್ಟು, ಅವಳ ನೃತ್ಯ ಕಾರ್ಯಕ್ರಮ ಎಲ್ಲೇ ಇದ್ದರೂ ತನಗೊಂದು ಮೆಸೇಜ್ ಹಾಕಬೇಕೆಂದೂ, ಕಲಾರಾಧಕನಾದ ತಾನು ನೋಡಿ ಆಸ್ವಾದಿಸುತ್ತೇನೆಂದೂ ಹೇಳುತ್ತಾನೆ.

ಹೀಗೆ ಪ್ರಾರಂಭವಾದ ಅವರ ಪರಿಚಯ ಬೆಳೆದು, ಮಾತು, ಭೆಟ್ಟಿ ಎಂದೆಲ್ಲಾ ಮುಂದುವರೆದು, ನಾಯಕನ ಮನದಲ್ಲಿ ಆಕೆಯ ಪ್ರತಿ ಉತ್ಕಟ ಪ್ರೇಮಜ್ವಾಲೆಗೆ ಪುಟವಿಕ್ಕುವುದು ತಡವಾಗುವುದಿಲ್ಲ. ನಾಯಕ ನಾಯಕಿಯಲ್ಲಿ ತನ್ನ ಪ್ರೇಮನಿವೇದನೆ ಮಾಡುತ್ತಾನೆ. ತನ್ನ ಜೀವನ ಸಂಗಾತಿಯಾಗಲು ಕೇಳಿಕೊಳ್ಳುತ್ತಾನೆ. ಆಕೆಯೂ ಆತನಲ್ಲಿ ಅನುರಕ್ತೆ! ಆದರೆ, ನಾಯಕಿಯ ತಾಯಿಗೆ ಇದು ಸುತರಾಂ ಇಷ್ಟವಿಲ್ಲ. ಇದೀಗ ಪ್ರಸಿದ್ಧಿಯ ಮೆಟ್ಟಿಲುಗಳನ್ನು ಒಂದೊಂದಾಗಿ ಏರುತ್ತಿರುವ ನೃತ್ಯಕಲಾವಿದೆ ಪ್ರೀತಿ, ಪ್ರೇಮ, ಮದುವೆ ಎಂಬ ಉರುಳಿಗೆ ತಲೆಯೊಡ್ಡಲೇಬಾರದು. ಕಥಾನಾಯಕನ ವಯಸ್ಸೂ ತೀರ ಹೆಚ್ಚು. ತಾಯಿ ಅವರಿಬ್ಬರ ನಡುವಿನ ಅಡ್ಡಗೋಡೆಯಾಗುತ್ತಾಳೆ. ನಾಯಕ ನಾಯಕಿ ಬೇರೆಯಾಗುತ್ತಾರೆ.

ಗುರುರಾಜ ಕಾದಂಬರಿಯನ್ನು ಮತ್ತೊಮ್ಮೆ ಮಗದೊಮ್ಮೆ ಓದಿದ. ನೂರೈವತ್ತು ಪುಟಗಳಲ್ಲಿ ನಾಯಕನ ಕಣ್ಣು ಅದ್ಭುತವಾಗಿ ಚಿತ್ರಿಸಿದ ನಾಯಕಿಯ ಸುಂದರ ಚಿತ್ರಗಳು, ಅವಳ ರಂಗು ರೂಪು ರೇಖೆಗಳು, ಅವಳ ನೃತ್ಯದ ವರ್ಣನೆಗಳು ಗುರುರಾಜನ ಕಣ್ಣಮುಂದೆ 'ಅಭಿಜಾತೆ'ಯನ್ನು ರಕ್ತಮಾಂಸ ಸಹಿತ ತಂದು ನಿಲ್ಲಿಸಿದ್ದವು. ಕಾದಂಬರಿಯುದ್ದಕ್ಕೂ ರೇಶಿಮೆಯ ಎಳೆಎಳೆಯಾಗಿ ಹರಡಿಕೊಂಡ ನಾಯಕನ ಮನದ ಭಾವನೆಗಳು, ಹನಿಹನಿಯಾಗಿ ಜಿನುಗಿದ ಪ್ರೇಮಪಲಕುಗಳು, ಭಗ್ನಹೃದಯಿಯ ನೋವಿನ ಸೂಜಿಮೊನೆಗಳು ಕೋಣೆಯಲ್ಲಿ ದಟ್ಟವಾಗಿ ಸುರಿದು ಗುರುರಾಜನನ್ನು ಆವರಿಸಿಕೊಂಡವು.

ಸಂಜೆ, ಪ್ರೊ. ಕೊಂಡಾಜಿಯವರ ಡ್ರಾಯಿಂಗ್ ರೂಮಿನಲ್ಲಿ ಚಹಾ ಹೀರುತ್ತ, 'ಅಭಿಜಾತೆ'ಯನ್ನು ಟೀಪಾಯ್ ಮೇಲಿಡುತ್ತ, 'ಸರ್ರ, ಈ ಕಾದಂಬರಿ ಭಾರೀ ಅದ ನೋಡ್ರಿ. ಲೇಖಕ ನಾಯಕಿ ಚಿತ್ರಾನ ಇಷ್ಟ ಛಂದ ಕಟ್ಟಿಕೊಟ್ಟಾನಲಾ ನಾಯಕಿ ಮಾರಿ, ಕಣ್ಣು ಮೂಗು ಕಿವಿ, ಕೂದಲಾ ತುಟಿ ಮ್ಯಾಲೆ ಎಡಗಡೆ ಇರೂ ಕಪ್ಪು ಚುಕ್ಕಿ ಸ್ವತಾ ಕಣ್ಣಾರೆ ನಾನ ಅಕಿನ್ನ ನೋಡೇನೇನೊ ಅನಿಸಿಬಿಡ್ತು. ತೇಜಶ್ರೀ ಅಂತ ಬರದವ್ರ ಹೆಸರು. ನಿಮಗೇನರ ಗೊತ್ತದ ಏನು ಅವ್ರ ಬಗ್ಗೆ? ಅವ್ರು ಮತ್ತೇನೇನ ಬರದಾರ ಐ ಮಸ್ಟ್ ರೀಡ್ ಹಿಮ್' ಎಂದ ಗುರುರಾಜ. ಕೊಂಡಾಜಿಯವರು ಪುಸ್ತಕ ಕೈಗೆತ್ತಿಕೊಂಡು ಪುಟ ತಿರುಗಿಸಿ ನೋಡಿದರು. 'ಹೌದು, ನಾನೂ ಓದೇನಿ ಇದನ್ನ. ಈ ಕಾದಂಬರಿ ಪ್ರಕಟ ಆದಾಗ ರಗಡ ಹೆಸರ ಮಾಡಿತ್ತು. ಇದೊಂದ ಕೃತಿ ಇವಂದು. ಮತ್ತ ಬರೀಲೇ ಇಲ್ಲ ಅಂವಾ ಯಾವದ ರೀತಿ ಬೆಳಕಿಗೂ ಬರಲಿಲ್ಲಾ' ಎಂದರು.

'ಸರ್ರ, ಇದರ ಲೇಖಕ ಯಾರಂತ ಗೊತ್ತದ ಏನ ನಿಮಗೆ? ಖರೆ ಹೆಸರ ಅದನೊ ಕಾವ್ಯನಾಮ ಅದನೊ? ಗೂಗಲ್ ಮಾಡಿದ್ರ ಏನ ಸಿಗಲಿಲ್ಲ. ಮತ್ತ ಕಥಿ ಪಾತ್ರಗಳು ಕಾಲ್ಪನಿಕ ಅಂತೀರೊ? ಲೇಖಕರ ಸ್ವಂತ ಅನುಭವ ಅಂತೀರೊ? ಇಲ್ಲಿನ ಸೌಂದರ್ಯ ಆರಾಧನೆ, ಪ್ರೀತಿ ಚೆಗತು ಅಕಿ ಇಲ್ಲದ ನಾ ಜೀವಂತ ಇರೂದನ ಇಲ್ಲಾ ಅನ್ನೊದು, ಅಕಿ ಸಿಗಲಿಲ್ಲಾ ಅಂದಾಗ ಜಗತ್ತ ಮುಳಗಿ ಹೋತು ಅನ್ನೊದು, ಪ್ರತಿಯೊಂದೂ ಸಣ್ಣಸಣ್ಣ ಡೀಟೇಲ್ ಕೂಡಿ ಇಷ್ಟು ದಟ್ಟ ಚಿತ್ರ ಕಟ್ಟಿಕೊಡತಾವಲಾ ನನಗಂತೂ ಇದು ಲೇಖಕರ ಸ್ವಂತ ಅನುಭವ ಅಂತನ ಅನಸ್ತದ. ನೀವೇನಂತೀರಿ ಸರ್?' ತನ್ನ ಅನಿಸಿಕೆಯನ್ನು ಮುಂದಿಟ್ಟ ಗುರುರಾಜ.

ಕೊಂಡಾಜಿಯವರು ಚಹಾದ ಕಪ್ಪನ್ನು ಟೀಪಾಯ್ ಮೇಲಿಡುತ್ತ ಹೇಳಿದರು, 'ಸಾಹಿತ್ಯದೊಳಗ, ಒಬ್ಬ ಲೇಖಕ ತನ್ನ ಬರವಣಿಗಿ ಒಳಗ ತನ್ನನ್ನೇ ಒಂದು ಪಾತ್ರವಾಗಿಸಿಕೊಂಡು, 'ನಾನು' ಅಂತ ಬರೀತಾನ ಅಂದ್ರ ಅದು ಅಂವಂದ ಕಥಿ ಅಂತಲ್ಲ ಅಂವಂದ ಇದ್ರೂ ಇರಬಹ್ದು, ಮತ್ತೊಬ್ಬರ್ದೂ ಇರಬಹ್ದು, ಓದೂವವಂದೂ ಇರಬಹ್ದು. ಅದು ಅಲ್ಲೇ ಸಾರ್ವತ್ರೀಕರಣಗೊಳ್ಳತದ ಅನ್ನೂದನ್ನ ನಾವು ಲಕ್ಷದಾಗಿಟಗೋಬೇಕು. ಹಾಂ, ತೇಜಶ್ರೀ ಅಂವನ ಕಾವ್ಯನಾಮ ಅದ. ಒಂದ ಕಾಲದಾಗ ಅಂವಾ ನನ್ನ ಸ್ಟೂಡಂಟ್ ಆಗಿದ್ದಾ. ಅಂವಾ ಡೀಪ್ ಡಿಪ್ರೆಶನ್ನದಾಗ ಹೋಗಿದ್ದಾ ಅಂತ ಒಮ್ಮೆ ಕೇಳಿದ್ದೆ. ಅಂವನ ಜೀವನದಾಗ ಇಂಥಾದ್ದೇನೊ ನಡೀತೊ ಇಲ್ಲೋ ನನಗ ಗೊತ್ತಿಲ್ಲ. ಅಭಿಜಾತೆ ಖರೆ ಪಾತ್ರಾನೋ ಕಾಲ್ಪನಿಕನೋ ಅದೂ ನನಗ ಗೊತ್ತಿಲ್ಲ. ಅದನ್ನ ಕೆದರಲಿಕ್ಕೆ ಹೋಗಬಾರ್ದು. ಅದು ಲೇಖಕನ ಪ್ರೈವಸಿ. ಹಾಂ, ಲೇಖಕ ತಾನಾಗೇ ಇದು ನನ್ನ ಆತ್ಮಕಥನ ಅಂತ ಹೇಳಿಕೊಂಡ್ರ ಮಾತು ಬ್ಯಾರೆ'.

'ಸರ್, ತೇಜಶ್ರೀ ಅವರ ಖರೆ ಹೆಸ್ರು ಏನ್ರೀ ಸರ್? ಇಷ್ಟು ಒಳ್ಳೇ ಬರಹಗಾರ ಮತ್ಯಾಕ ಏನೂ ಬರೀಲಿಲ್ಲಾ ಅನ್ನೂ ಕುತೂಹಲ ನನಗ. ಜಸ್ಟ್ ಫಾರ್ ದ ಸೇಕ್ ಆಫ್ ಕ್ಯೂರಿಯಾಸಿಟಿ'.

'ಅಂವಾ ರವಿತೇಜ ಶ್ರೀನಿವಾಸ ಹುಬ್ಬಳ್ಳಿ

